ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಬೇಲೂರು, ನ್ಯಾಯಾಲಯ, ಬೇಲೂರು.

ಸಿಸಿ ನಂಬರ್ಃ **77/2018**

ಪಿರ್ಯಾದುದಾರರು ಃ ರಾಜ್ಯ ಸರ್ಕಾರದ ಪರವಾಗಿ
ಅಬಕಾರಿ ಇಲಾಖೆ

ವಿರುದ್ಧ

ಆರೋಪಿ ಃ ಶ್ರೀ ದೇವರಾಜೇಗೌಡ
ಬಿನ್ ತಿಮ್ಮೇಗೌಡ, **52** ವರ್ಷ,
ವಾಸಃ- ದಬ್ಬೆ ಗ್ರಾಮ, ಅರೇಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿ ಹೇಳಿಕೆ

ಪ್ರಶ್ನೆ ಃ **1** ಃ ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ **?**

ಉತ್ತರಃ

ಪ್ರಶ್ನೆ ಃ **2** ಃ ಪ್ರಾಸಾ-**3** ಶ್ರೀ ಉಮೇಶ್, ಅಬಕಾರಿ ಪೇದೆ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **03.12.2016** ರಂದು ಸಂಜೆ **4.15** ರ ಸಮಯದಲ್ಲಿ ಬೇಲೂರು ತಾಲೂಕು ಅರೇಹಳ್ಳಿ ಹೋಬಳಿ ದಬ್ಬೆ ಗ್ರಾಮದಲ್ಲಿ ದೇವರಾಜೇಗೌಡ ಎಂಬುವವರು ಅಕ್ರಮವಾಗಿ ಕಳ್ಳಭಟ್ಟಿ ದಾಸ್ತಾನು ಹೊಂದಿರುತ್ತಾರೆ ಎಂದು ನಮ್ಮ ಅಬಕಾರಿ ಉಪನಿರೀಕ್ಷಕರಿಗೆ ಮೌಖಿಕವಾಗಿ ಬಂದ ಮಾಹಿತಿ ಮೇರೆಗೆ ನಾವು ಚಾಸಾ**6** ರವರೊಂದಿಗೆ ದಬ್ಬೆ ಗ್ರಾಮಕ್ಕೆ ಹೋದೆವು. ದಬ್ಬೆ ಗ್ರಾಮದ ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಚಾಸಾ-**1** ಮತ್ತು **2** ರವರನ್ನು ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದಾಗ ಅವರು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ **ಃ 3 ಃ** ಪ್ರಾಸಾ-**3** ಶ್ರೀ ಉಮೇಶ್ ರವರು ಮುಂದುವರೆದು, ನಂತರ ದೇವರಾಜೇಗೌಡರವರ ಮನೆಗೆ ತೆರಳಿದಾಗ ಸದರಿ ದೇವರಾಜೇಗೌಡ ಮನೆಯಲ್ಲಿ ಹಾಜರಿದ್ದರು. ಮಾನ್ಯ ಘನ ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ **54** ರಡಿಯಲ್ಲಿ ಸ್ಥಳದಲ್ಲೇ ಶೋಧನ ಸಮುಚಿತ ಆಧಾರ ತಯಾರಿಸಿ ಮನೆಯನ್ನು ಪರಿಶೀಲಿಸಿದಾಗ ಮನೆಯ ಒಳಗೆ **15** ಲೀ ಸಾಮಾರ್ಥ್ಯದ **3** ಪ್ಲಾಸ್ಟಿಕ್ ಕೊಡದಲ್ಲಿ ತಲಾ **15** ಲೀ ನಂತೆ ಒಟ್ಟು **45** ಲೀ ನಷ್ಟು ಬೆಲ್ಲದ ಕೊಳೆ ಹಾಗೂ ಇನ್ನೊಂದು **2** ಲೀ ಸಾಮಾರ್ಥ್ಯದ ಪ್ಲಾಸ್ಟಿಕ್ ಬಾಟಲಿನಲ್ಲಿ **2** ಲೀ ನಷ್ಟು ಕಳ್ಳಭಟ್ಟಿ ಸರಾಯಿ ಇರುವುದು ಕಂಡುಬಂತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ **ಃ 4 ಃ** ಪ್ರಾಸಾ-**3** ಶ್ರೀ ಉಮೇಶ್ ರವರು ಮುಂದುವರೆದು, ಅವುಗಳನ್ನು ಮನೆಯ ಮುಂಭಾಗಕ್ಕೆ ತೆಗೆದುಕೊಂಡು ಬಂದು ದೊರೆತ ಸ್ವತ್ತಿನಿಂದ **500** ಎಂ ಎಲ್ ಬಾಟಲಿಯಲ್ಲಿ **500** ಎಂ ಎಲ್ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ **3** ಕೊಡಗಳ ಬೆಲ್ಲದ ಕೊಳೆಯಿಂದ ತಲಾ **500** ಎಂ ಎಲ್ ನಂತೆ **3** ಬಾಟಲಿಗಳಲ್ಲಿ ಮಾದರಿಗಾಗಿ ತೆಗೆದು, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲು ಕ್ರಮ **336** ನ್ನು ಜರುಗಿಸಲಾಯಿತು. ಮಹಜರ್ ಕ್ರಮವನ್ನು ಸಂಜೆ **4.30** ರಿಂದ **5.35** ಗಂಟೆಯವರೆಗೆ ಮಾಡಿರುತ್ತೇವೆ. ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ **ಃ 5 ಃ** ಪ್ರಾಸಾ-**4** ಶ್ರೀ ಶಾಂತೇಗೌಡ, ಪಿಡಿಒ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಬಕಾರಿ ಪೊಲೀಸರು ದೇವರಾಜೇಗೌಡ ಬಿನ್ ತಿಮ್ಮೇಗೌಡ ರವರ ಮನೆಯ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿದ್ದು, ಆ ಪ್ರಕಾರ ನಾನು ದೃಢಿಕರಣ ಪತ್ರ ನೀಡಿರುತ್ತೇನೆ. ಸದರಿ ಮನೆಯ ಖಾತೆ ಸಂಖ್ಯೆ **79** ಇರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ 6 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ., ಅಬಕಾರಿ ನಿರೀಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 03-12-2016 ರಂದು ಬೇಲೂರಿನ ತಾಲೂಕಿನ ದಬ್ಬೆ ಗಡಿಯಲ್ಲಿ ಸಿಬ್ಬಂಯೊಂದಿಗೆ ಗಸ್ತು ಮಾಡುತ್ತಿದ್ದಾಗ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ, ದಬ್ಬೆ ಗ್ರಾಮದಲ್ಲಿ ಆರೋಪಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಮಾಹಿತಿದಾರರನ್ನು ಪಂಚರಾಗಲು ಕೋರಿದಾಗ ಅವರು ನಿರಾಕರಿಸಿರುತ್ತಾರೆ. ನಂತರ ನಾವು ದಬ್ಬೆ ಗ್ರಾಮಕ್ಕೆ ಬಂದು ದಬ್ಬೆ ಗ್ರಾಮ ಪಂಚಾಯಿತಿ ಹತ್ತಿರ ಇದ್ದ ಇಬ್ಬರು ವ್ಯಕ್ತಿಗಳನ್ನು ವಿಷಯ ತಿಳಿಸಿ ಆರೋಪಿಯ ಮನೆಯ ಹತ್ತಿರ ಹೋಗಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 7 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ಮನೆಯಲ್ಲಿದ್ದ ವ್ಯಕ್ತಿಯನ್ನು ಕೂಗಿ ಕರೆದಾಗ ಒಬ್ಬ ವ್ಯಕ್ತಿ ಹೊರಗೆ ಬಂದಿದ್ದು ಅವರ ಹೆಸರು ವಿಳಾಸ ಕೇಳಿದಾಗ ಅವರು ದೇವರಾಜೇಗೌಡ ಬಿನ್ ತಿಮ್ಮೇಗೌಡ ಎಂದು ತಿಳಿಸಿದರು. ನಂತರ ಅವರಿಗೆ ಬಂದ ಮಾಹಿತಿ ತಿಳಿಸಿ ಮನೆಯನ್ನು ಶೋದನೆ ಮಾಡಬೇಕು ಎಂದು ತಿಳಿಸಿರುತ್ತೇನೆ. ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿಯಲ್ಲಿ ಸ್ಥಳದಲ್ಲೇ ಶೋಧನ ಸಮುಚಿತ ಆಧಾರ ತಯಾರಿಸಿಕೊಂಡು ಮತ್ತು ಪಂಚರ ಸಮಕ್ಷಮ ಅಂಗ ಶೋಧನೆ ಮಾಡಿದಾಗ ಮನೆಯಲ್ಲಿ 2 ಲೀ ಸಾಮಾರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ 15 ಲೀ ಸಾಮಾರ್ಥ್ಯದ 3 ಪ್ಲಾಸ್ಟಿಕ್ ಕೊಡಗಳಲ್ಲಿ 45 ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 8 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ಸದರಿ ಸ್ವತ್ತುಗಳನ್ನು ಮನೆಯ ಮುಂಭಾಗಕ್ಕೆ ತಂದು ಪರಿಶೀಲಿಸಿ ನೋಡಿ ಸದರಿ ಕಳ್ಳಭಟ್ಟಿ ಮತ್ತು ಬೆಲ್ಲದ ಕೊಳೆ ಎಂದು ಖಚಿತ ಪಡಿಸಿಕೊಂಡಿರುತ್ತೇನೆ. ಸದರಿ ವಸ್ತು ಯಾರಿಗೆ ಸೇರಿದು ಎಂದು ಕೇಳಿದಾಗ ಆರೋಪಿ ನನಗೆ ಸೇರಿದು

ಮಾರಾಟ ಮಾಡುವ ಉದ್ದೇಶಕ್ಕಾಗಿ ಹೊಂದಿವುದಾಗಿ ತಿಳಿಸಿದರು. ದಸ್ತಗಿರಿ ಮಾಡಿ ದೊರತೆ ವಸ್ತುಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ **500** ಎಂ ಎಲ್ ನಷ್ಟು ಕಳ್ಳಭಟ್ಟಿಯನ್ನು ಹಾಗೂ **3** ಕೊಡಗಳಿಂದ ಸೇರಿ **500** ಎಂ ಎಲ್ ನಷ್ಟು ಬೆಲ್ಲದ ಕೊಳೆಯನ್ನು **500** ಎಂ ಎಲ್ **3** ಪ್ಲಾಸ್ಟಿಕ್ ಬಾಟಲಿಗಳಲ್ಲಿ ಮಾದರಿಗಾಗಿ ತೆಗೆದು, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲನ್ನು ಜರುಗಿಸಲಾಯಿತು. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **9** ಃ ಪ್ರಾಸಾ-**5** ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ನಂತರ ಕೃತ್ಯ ಸ್ಥಳದ ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ಹಿತ್ತಲು, ಉತ್ತರ ಹಾಗೂ ದಕ್ಷಿಣಕ್ಕೆ ಖಾಲಿ ಜಾಗ ಇರುವುದು ಕಂಡು ಬಂದಿರುತ್ತದೆ. ಕಚೇರಿಗೆ ವಾಪಸ್ಸು ಬಂದು ಪ್ರವವವರದಿಯನ್ನು ಹಾಗೂ ಇತರೇ ದಾಖಲೆಯನ್ನು ತಯಾರಿಸಿ ಆರೋಪಿಯನ್ನು ನ್ಯಾಯಾಲಕ್ಕೆ ಹಾಜರು ಪಡಿಸಿರುತ್ತೇನೆ. ದಿನಾಂಕ **08.12.2016** ರಂದು ಚಾಸಾ-**4** ರವರೊಂದಿಗೆ ಬೆಂಗಳೂರಿನ ರಾಸಾಯಿನಿಕ ಪ್ರಯೋಗಲಾಯಕ್ಕೆಕಳುಹಿಸಿರುತ್ತೇನೆ. ದಿನಾಂಕ **05.01.2017** ರಂದು ರಾಸಾಯಿನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಅಬ್ದುಲ್ ನಿಸಾರ್ ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **10** ಃ ಪ್ರಾಸಾ-**6** ಶ್ರೀ ಎಂ.ಕೆ.ಕೇಶವಮೂರ್ತಿ, ಅಬಕಾರಿ ನಿರೀಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಮೊಕದ್ದಮೆಗೆ ಸಂಬಂಧಿಸಿದಂತೆ ಚಾಸಾ-**6** ರವರಿಂದ ಕಡತವನ್ನು ಸ್ವೀಕರಿಸಿ ತನಿಖೆ ಪೂರ್ಣಗೊಳಿಸಿ ದಿನಾಂಕ **05.05.2015** ರಂದು ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೆನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **11** ಃ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವೇನಾದರೂ ಹೇಳುವುದು ಇದೆಯಾ**?**
ಉತ್ತರ ಃ

ಪ್ರಶ್ನೆ ಃ **12** ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯಾ**?**

ಉತ್ತರ ಃ

ಪ್ರಶ್ನೆ ಃ **13** ಃ ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸುವಿರಾ**?**
ಉತ್ತರ ಃ

**(**ಮೇಲ್ಕಂಡ ಅಂಶಗಳನ್ನು ಆರೋಪಿಗೆ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಡೀಕರಿಸಿದೆ**)**

ದಿನಾಂಕ ಃ **06.03.2026**
ಸ್ಥಳ ಃ ಬೇಲೂರು

(ಶ್ರೀ.ನಾಗೇಂದ್ರ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಬೇಲೂರು.